**PW**-3

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ ನ್ಯಾಯಾಲಯ, ಸುಳ್ಯ, ದ.ಕ

## **M.V.C.No.**552/2025

| | |
|---|---|
| ಹೆಸರು | : ದೀಕ್ಷಿತ್ |
| ತಂದೆಯ ಹೆಸರು | :ಹುಕ್ರಪ್ಪ ಗೌಡ |
| ಪ್ರಾಯ | :33 ವರ್ಷ |
| ಉದ್ಯೋಗ | :ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಪಿ.ಎ.ಸಿ.ಸಿ ಬ್ಯಾಂಕ್ ಐವರ್ನಾಡು |
| ವಾಸ | :ಐವರ್ನಾಡು |

**ದಿನಾಂಕ 22.01.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ರವರಿಂದಃ**

ನಾನು ಐವರ್ನಾಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕ್ ದಲ್ಲಿ 12 ವರ್ಷಗಳಿಂದ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನನಗೆ ಮೃತ ಬೋಜಪ್ಪ ಗೌಡರವರ ಪಡಿಚಯ ಇದೆ. ಅವರು ನಮ್ಮ ಸಹಕಾರಿ ಬ್ಯಾಂಕ್ ನಲ್ಲಿ ಸುಮಾರು 25 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದರು. ಕಳೆದ 3 ವರ್ಷಗಳ ಹಿಂದೆ ಅವರು ಲೆಕ್ಕಾಧಿಕಾರಿಯಾಗಿ ಬಡ್ತಿ ಹೊಂದಿ ಕೆಲಸ ಮಾಡುತ್ತಿದ್ದರು. ಅವರು ತೀರಿಕೊಳ್ಳುವ ಸಮಯದಲ್ಲಿ ಅವರು ಒಟ್ಟು ರೂ.51,300/- ವೇತನ ಪಡೆದುಕೊಳ್ಳುತ್ತಿದ್ದರು. ಈ ಬಗ್ಗೆ ವೇತನ ಪ್ರಮಾಣ ಪತ್ರವನ್ನು ಹಾಜರು ಪಡಿಸುತ್ತಿದ್ದು,

ಅದನ್ನು ಈಗಾಗಲೇ ನಿಪಿ-13 ಎಂದು ಗುರುಸಲಾಗಿದೆ. ಅಪಘಾತವಾದ ದಿನ ಮೃತ ಬೋಜಪ್ಪ ಗೌಡರು ನಮ್ಮಲ್ಲಿ ಕೆಲಸ ಮಾಡಿಕೊಂಡಿದ್ದರು. ನಿಪಿ-13 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎನ್.ಕೆ ವಕೀಲರಿಂದಃ</u>**

ನಾನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂದು ಹೇಳಲು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಆದರೆ ಗುರುತಿನ ಚೀಟಿ ನನ್ನ ಬಳಿ ಇದೆ. ನಾವು ವೇತನ ಪ್ರಮಾಣ ಪತ್ರವನ್ನು ಮೂರನೇ ವ್ಯಕ್ತಿಗಳಿಗೆ ನೀಡುವುದಿಲ್ಲ ಎಂದರೆ ಸರಿ. 3ನೇ ವ್ಯಕ್ತಿಗಳು ನಮ್ಮ ಬ್ಯಾಂಕಿನ ನೌಕರರ ವೇತನ ಪ್ರಮಾಣ ಪತ್ರ ಪಡೆಯಬೇಕಾದಲ್ಲಿ ಮಾಹಿತಿ ಹಕ್ಕಿನ ಅಡಿಯಲ್ಲಿ ಅರ್ಜಿ ಸಲ್ಲಿಸಬೇಕು ಎಂದರೆ ಸರಿ. ಆದರೆ ಮನೆಯವರು ಅರ್ಜಿ ಸಲ್ಲಿಸಿದರೆ ನಾವು ವೇತನ ಪ್ರಮಾಣ ಪತ್ರ ನೀಡುತ್ತೇವೆ. ಆ ರೀತಿ ಅರ್ಜಿ ಮೇರೆಗೆ ವೇತನ ಪ್ರಮಾಣ ಪತ್ರ ನೀಡುವ ಸಮಯದಲ್ಲಿ ಯಾರ ಕೋರಿಕೆಯ ಮೇರೆಗೆ ವೇತನ ಪ್ರಮಾಣ ಪತ್ರ ನೀಡುತ್ತೇವೆ ಎಂಬ ಬಗ್ಗೆ ವೇತನ ಪ್ರಮಾಣ ಪತ್ರದಲ್ಲಿ ನಮೂದು ಮಾಡುತ್ತೇವೆ ಎಂದರೆ ಸರಿ. ಆದರೆ ನಿಪಿ-13 ರಲ್ಲಿ ಯಾರ ಕೋರಿಕೆಯ ಮೇರೆಗೆ ವೇತನ ಪ್ರಮಾಣ ಪತ್ರ ನೀಡಿರುತ್ತೇವೆ ಎಂದು ನಮೂದು ಮಾಡಿರುವುದಿಲ್ಲ. ಮೃತರ ವೇತನ ಪ್ರಮಾಣ ಪತ್ರ ಪಡೆದುಕೊಳ್ಳಲು ಅರ್ಜಿ ಸಲ್ಲಿಸಿದ ಬಗ್ಗೆ ನಮ್ಮ ಬ್ಯಾಂಕಿನಲ್ಲಿ ದಾಖಲೆ ಇರುತ್ತದೆ.

ಮೃತ ಬೋಜಪ್ಪ ಗೌಡರು ಬ್ಯಾಂಕಿಗೆ ನೇಮಕವಾದ ಬಗ್ಗೆ ನೇಮಕಾತಿ ಆದೇಶ ಇರುತತದೆ. ಅದರಲ್ಲಿ ಮೂಲ ವೇತನ ನಮೂದಾಗಿರುತ್ತದೆ ಎಂದರೆ ಸರಿ. ಮೃತ ಬೋಜಪ್ಪ ಗೌಡರ ಸೇವಾ ರಿಜಿಸ್ಟರ್ ನಮ್ಮ ಬ್ಯಾಂಕಿನಲ್ಲಿ ಇರುತ್ತದೆ ಎಂದರೆ ಸರಿ. ವೇತನ ಪ್ರಮಾಣ ಪತ್ರ ನೀಡುವ ಮೊದಲು ಅದನ್ನು ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ನಂತರ ನೀಡಬೇಕು ಎಂದರೆ ಸರಿ. ನಿಪಿ-13 ನ್ನು ನೀಡುವ ಮೊದಲು ನಾವು ಮೇಲೆ ಹೇಳಿದ ಪ್ರಕ್ರಿಯೆಗಳನ್ನು ನಡೆಸಿರುತ್ತೇವೆ ಎಂದರೆ ಸರಿ. ನಾನು ಐವರ್ನಾಡು ಪಾ.ಕೃಷಿ

ಪ್ತನ ಸಹಕಾರಿ ಸಂಪಿದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬದವರು ನಮ್ಮಲ್ಲಿ ಅರ್ಜಿ ಸಲ್ಲಿಸಿ ವೇತನ ಪ್ರಮಾಣ ಪತ್ರ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ದಾಖಲೆಗಳನ್ನು ಪರಿಶೀಲನೆ ಮಾಡದೇ ಸುಳ್ಳು ವೇತನ ಪ್ರಮಾಣ ಪತ್ರವನ್ನು ಅನಧಿಕೃತವಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮೃತ ಬೋಜಪ್ಪ ಗೌಡರಿಗೆ ನಿಪಿ-13ರಲ್ಲಿ ನಮೂದು ಮಾಡಿರುವಷ್ಟು ವೇತನ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ